**<u>ದಿನಾಂಕಃ 23.08.2025 ರಂದು ಸಾಕ್ಷಿ ಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>**

ನಾನು ಎಸ್.ಎಸ್.ಎಲ್.ಸಿ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಭಾಷೆ ಮಾತ್ರ ಓದಲು ಬರೆಯಲು ಬರುತ್ತದೆ. ನಿಮ್ಮ ಪ್ರಮಾಣ ಪತ್ರ ಆಂಗ್ಲಭಾಷೆಯಲ್ಲಿದೆ ಎಂದರೆ ಸರಿ. ಪ್ರಮಾಣ ಪತ್ರದಲ್ಲಿನ ಅಂಶಗಳನ್ನು ನಾನು ತಿಳಿದುಕೊಂಡಿರುತ್ತೇನೆ. ಪ್ರಮಾಣ ಪತ್ರವನ್ನು ತಯಾರಿಸಲು ಯಾರು ಮಾಹಿತಿ ನೀಡಿರುತ್ತಾರೆ ಎಂದರೆ ಕಿರಣ್ ವಕೀಲರು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಲೀಗಲ್ ನೋಟೀಸು ಆರೋಪಿತರಿಗೆ ಯಾವಾಗ ತಲುಪಿದೆ ಎಂದು ನನಗೆ ಗೊತ್ತಿಲ್ಲ. ನಿಮ್ಮ ಪ್ರಮಾಣ ಪತ್ರದಲ್ಲಿ ದಿ.10.01.2022 ರಂದು ನೋಟೀಸು ಜಾರಿಯಾಗಿರುತ್ತದೆ ಎಂದು ನಮೂದಿಸಿದ್ದೀರಿ ಎಂದರೆ ಸರಿ. ಅಂಚೆ ಸ್ವೀಕೃತಿಯಲ್ಲಿನ ಸಹಿ ಆರೋಪಿಯದ್ದಾಗಿರುತ್ತದೆ. ಚೆಕ್ಕಿನಲ್ಲಿರುವ ಸಹಿಯೂ ಸಹ ಆರೋಪಿಯದ್ದಾಗಿರುತ್ತದೆ. ಚೆಕ್ಕಿನಲ್ಲಿರುವ ಸಹಿ ಮತ್ತು ಅಂಚೆ ಸ್ವೀಕೃತಿಯಲ್ಲಿನ ಸಹಿಗಳಿಗೆ ವ್ಯತ್ಯಾಸ ಇದೆ ಎಂದರೆ ಸರಿ. ದಾಖಲೆಗಳ ಪ್ರಕಾರ ದಿ.25.02.2022 ರಂದು ಅಥವಾ ಅದರೊಳಗಾಗಿ ಪ್ರಕರಣ ದಾಖಲಿಸಬೇಕಾಗಿತ್ತು ಎಂದರೆ ಸರಿ. ದಿ.10.01.2022 ರಿಂದ 25.02.2022 ರವರೆಗೆ ತಾವು ಆರೋಗ್ಯವಾಗಿದ್ದೀರಿ ಎಂದರೆ ಸರಿ.

**<u>ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಮುಂದೂಡಲಾಯಿತು.</u>**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**( ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ
ಬೆಂಗಳೂರು.